R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ– IVಎ<br>**Part– IVA** | ಬೆಂಗಳೂರು, ಶನಿವಾರ, ೦೨, ಏಪ್ರಿಲ್, ೨೦೨೦ (ವೈಶಾಖ ೧೨, ಶಕವರ್ಷ ೧೯೪೨)<br>**Bengaluru, SATURDAY,02,APRIL,2020 (Vaishakha 12, ShakaVarsha 1942)** | ನಂ. ೧೫೯<br>**No. 159** |

**DEPARTMENT OF PERSONNEL AND ADMINISTRATIVE REFORMS**

**No: DPAR 28 SDE 2018, Bengaluru, Dated 02.05.2020.**

## NOTIFICATION

The draft of the following rules to further amend the Karnataka Civil Services (Classification, Control and Appeal) Rules, 1957 which the Government of Karnataka proposes to make in exercise of the powers conferred by sub-section (1) of section 3 read with section 8 of the Karnataka State Civil Services Act, 1978 (Karnataka Act 14 of 1990), is hereby published as required by clause (a) of sub-section (2) of section 3 of the said Act for the information of persons likely to be affected thereby and notice is hereby given that the said draft rules will be taken up for consideration after fifteen days from the date of their publication in the Official Gazette.

Any objections or suggestions which may be received by the State Government from the said persons with respect to the said draft rules during the period specified above will be considered by the Government. Objections or suggestions may be addressed to the Secretary to Government, Department of Personnel and Administrative Reforms, Vidhana Soudha, Bengaluru – 560001.

## DRAFT RULES

1. **Title and Commencemen**t,- (1) These rules may be called the Karnataka Civil Services (Classification, Control and Appeal) (Amendment) Rules, 2020.

(2) They shall come into force from the date of their publication in the Official Gazette.

2. **Amendment of rule 8:** In the Karnataka Civil Services (Classification, Control and Appeal) Rules, 1957, (hereinafter referred as, “the said rules”), for rule 8, the following shall be substituted, namely:

**“8. Nature of Penalties,-** One or more of the following penalties for good and sufficient reasons and as hereinafter provided, may be imposed on Government servants, namely,-

**(1) Minor Penalties:**

(i) Fine in the case of Government servants holding posts in Group-D.
(ii) Censure.
(iii) Withholding of annual increments without cumulative effect.

**Explanation:** For the purposes of clause (iii), the term "annual increments", shall mean the annual increments due to accrue to the Government servant in future and the term, "without cumulative effect" means that on expiry of the period of penalty of withholding increments, the pay of the Government servant shall be fixed prospectively as if the said penalty was not imposed on him and the amount of the increments withheld shall not be refunded to him.

(iii-a) Withholding of promotion.

(iv) Recovery from the pay of a Government servant, the whole or part of any pecuniary loss, caused by him by negligence or breach of orders, to the State Government or to the Central Government or any other state Government or any person, body or authority to whom his service has been lent.

**Note**: The words, "pecuniary loss" shall mean and include interest from the date of causing such loss at eight percent per annum on the loss caused by the Government servant.

(iv-a) Reduction of the present basic pay of the Government servant to a stage lower than the present stage in the time-scale of pay for a specified period without cumulative effect. The Government servant shall not be eligible to earn annual increments during the period of such reduction and his pay shall remain constant.

**Explanation:** For the purposes of clause (iv-a), the term "stage" means the stage of the annual increments in the time scale of pay and the term, "without cumulative effect" means that on expiry of the period of penalty of withholding increments, the pay of the Government servant shall be fixed prospectively as if the said penalty was not imposed on him and the amount of pay withheld shall not be refunded to him.

**2.Major Penalties:**

(v) Reduction of the present basic pay of the Government servant to a stage lower than the present stage in the time-scale of pay for a specified period with cumulative effect. The Government servant shall not be eligible to earn annual increments during the period of such reduction and his pay shall remain constant.

**Explanation:** For the purposes clause (v), the term, "with cumulative effect" means that on expiry of the period of penalty of reduction of basic, the pay of the Government servant shall be fixed taking into account the said penalty of reduction of pay, that is, his basic pay shall be fixed at the same stage at which he was drawing it at the time of imposition of the penalty.

(v-a) Withholding of annual increments with cumulative effect.

**Explanation:** For the purposes of clause (v-a), the term "annual increments", shall mean the annual increments due to accrue to the Government servant in future and the term "with cumulative effect" shall mean that on expiry of the period of penalty of withholding increments, the pay of the Government servant shall be fixed taking into account the said penalty and he shall not be entitled for release of the increments withheld and he shall earn increments from the stage at which he was drawing pay at the time of the imposition of the penalty.

(v-b) Reduction to a lower post for a period to be specified in the order of penalty. The pay of the Government servant, on whom the penalty of reduction to lower post is imposed, shall be fixed in the scale of pay of the lower post at the stage corresponding to the stage at which he was drawing his pay in the scale of pay of the post he held by him at the time of imposition of the penalty. He shall not be eligible to earn increments during the period of operation of the penalty. Besides, his seniority shall remain in the seniority list of the post which he held at the time of imposition of the penalty and the same seniority shall continue. He shall, however, not be eligible to be promoted to a higher post on the basis of that seniority during the period of operation of the penalty. After expiry of the specified period of the penalty of such reduction to a lower post, he shall be entitled for automatic restoration to the original post from which he was reduced by protecting his seniority as if the penalty was not imposed on him. He shall, however, not be entitled to claim retrospective promotion.

Provided that a Government servant shall not be reduced under this clause, to a post lower than that to which he was initially appointed.

(vi) **Compulsory retirement**. A Government servant on whom the penalty of compulsory retirement is imposed under this clause shall be entitled for pensionary benefits in respect of the service rendered by him till the date of order imposing the penalty in accordance with the rules regulating such pensionary benefits.

(vii) **Removal from service.** A Government servant on whom the penalty of removal from service is imposed under this clause shall not be entitled to

pensionary benefits. However, imposition of the penalty of removal from service under this clause shall not be a disqualification for appointment to the civil services of the state in future.

(viii) **Dismissal from service**. A Government servant on whom the penalty of dismissal from service is imposed under this clause shall not be entitled to pensionary benefits. Imposition of the penalty of dismissal from service under this clause shall ordinarily be a disqualification for appointment to the civil services of the state in future.

Provided that in the absence of special and adequate reasons to the contrary mentioned in the order of the disciplinary authority, no penalty other than any of those specified in clauses (vi) to (viii) shall be imposed for an established charge of corruption.

**Explanation :** For purposes of this proviso, the expression "corruption" shall have the meaning assigned to the expression "Criminal misconduct by a public servant" in section 13 of the Prevention of Corruption Act, 1988 (Central Act 49 of 1988).

Provided further that, notwithstanding anything contained in these rules, if in a case, the nature of the imputations of misconduct or misbehaviour is comparable to those illustrated in column 2 of the table hereunder and the disciplinary authority, having regard to its findings on all or any of the charges relating to such imputations of misconduct or misbehaviour, is of the opinion that one or more of the penalties specified in clauses (i) to (viii) of this rule may be imposed on the Government servant, it may make an order imposing such a penalty or penalties **as per the indicative penalties**in the corresponding column 3 thereof:

**TABLE**

| **Sl. No.** | **Nature of imputations of misconduct or misbehavior** | **Indicative penalties which may be imposed** |
|---|---|---|
| **(1)** | **(2)** | **(3)** |
| 1 | Unauthorized absence for a period exceeding one month and less than four months. | Withholding of three annual increments. |
| 2 | Unauthorized absence for a period exceeding four months. | Removal from service. |
| 3 | Temporary misappropriation of Government money less than rupees ten thousand. | Withholding of five annual increments. |
| 4 | Temporary misappropriation of Government money exceeding rupees ten thousand. | Reduction of pay to a lower stage in the time scale of pay of the post. |

| | | |
|---|---|---|
| | | (Reduction of basic pay with cumulative effect to a stage lower than the present stage of the basic pay of the Government servant for a specified period) |
| 5 | Misappropriation / misuse of Government money. | Compulsory retirement from service. |
| 6 | Procedural lapses. | Censure on the first occasion and reduction to a lower stage in the time scale of pay on second and subsequent occasions. |
| 7 | Unreasonable / unjustified delay beyond the time limits prescribed in manuals of office procedure etc., | 'Censure' on the first occasion and withholding of at least one annual increment on the second and subsequent occasions. |
| 8 | Sexual harassment. | Reduction to a lower post. |
| 9 | Refusal to obey written instructions of superior officers. | Withholding of two annual increments. |
| 10 | Using official position or influence to get employment to the members of the family in any company/institution. | Reduction of pay to a lower stage in the time scale of pay.<br>(Reduction of basic pay without cumulative effect to a stage lower than the present stage of the basic pay of the Government servant for a specified period) |
| 11 | While discharging his official duties, dealing in any manner or giving or sanctioning any contract to any company/firm or any person, if any member of his family is employed in that company or firm or if he or any member of his family is personally interested in such matter or contract. | Compulsory retirement from service. |
| 12 | Taking part in politics or elections in violation of the Karnataka Civil Services (Conduct) Rules, 1966. | Compulsory retirement from service. |

| | | |
|---|---|---|
| 13 | Taking part in strikes and demonstrations in violation of the Karnataka Civil Services (Conduct) Rules, 1966. | Reduction of pay to a lower stage in the time scale of pay. |
| 14 | Publishing a book or participating in radio broadcast, contributing an article or writing a letter to a newspaper or periodical and other media in violation of the Karnataka Civil Services (Conduct) Rules, 1966. | Withholding of at least two annual increments. |
| 15 | Criticizing Government in violation of the Karnataka Civil Services (Conduct) Rules, 1966. | Withholding of at least two annual increments. |
| 16 | Asking for or accepting contributions or raising of any funds or other collections in cash or in kind in pursuance of any object whatsoever in violation of the Karnataka Civil Services (Conduct) Rules, 1966. | Reduction to lower time scale of pay. |
| 17 | Giving or taking or abetting giving or taking of dowry. | Removal from Government service. |
| 18 | Engaging in any trade or business or employment in violation of the provisions of the Karnataka Civil Services (Conduct) Rules, 1966. | Compulsory retirement. |
| 19 | Investing/ lending/ borrowing in violation of the Karnataka Civil Services (Conduct) Rules, 1966. | Reduction of pay to a lower stage in the time scale of pay. |
| 20 | Non submission of statement of assets and liabilities in violation of the Karnataka Civil Services (Conduct) Rules, 1966. | Withholding of at least one annual increment. |
| 21 | Transacting in moveable or immovable properties in violation of the Karnataka Civil Services (Conduct) Rules, 1966. | Withholding of at least one annual increment. |
| 22 | Contracting bigamous marriage in violation of the Karnataka Civil Services (Conduct) Rules, 1966. | Compulsory retirement from service. |
| 23 | Taking part/ engaging in activities related to cinemas / dramas in violation of the standing instructions of Government. | Withholding of two annual increments. |

| | | |
|---|---|---|
| 24 | Failure to write annual performance reports in accordance with the Karnataka Civil Services (Performance Reports) Rules, 2000. | Censure. |

Provided also that, the disciplinary authority, having regard to its findings on all or any of the charges relating to the imputations of misconduct or misbehaviour, for reasons to be recorded in writing, may impose a penalty or penalties which may be less or more severe than the penalties specified above and in a case where the nature of the imputations of misconduct or misbehaviour is not comparable to those illustrated in column 2, the disciplinary authority may make an order imposing one or more of any of the penalties specified in clauses (i) to (viii) of this rule.

**Explanation-2:** The following shall not amount to a penalty within the meaning of this rule:

(i) Withholding of increments of a Government servant for failure to pass Kannada language examination and service examinations in accordance with the Karnataka Civil Services (Service and Kannada Language Examination) Rules, 1974;

(ii) Non-promotion of a Government servant to a post where, after considering his case for promotion, he is found to be not eligible or not suitable;

(iii) Reversion of a Government servant from a higher post to a lower post on administrative grounds unconnected with his conduct such as the return of the permanent incumbent from leave or deputation, non-availability of vacancy to assign deemed date of eligibility and the like;

(iv) Reversion of a Government servant, appointed on probation to another service or post, to his permanent service or post in accordance with terms of his appointment or the rules and orders governing probation, either during or at the end of the period of probation;

(v) Compulsory retirement of a Government servant in accordance with the provisions relating to his superannuation or retirement;

(vi) Termination of services:

(a) of a person employed under an agreement, in accordance with the terms of such agreement; or

(b) of a Government servant appointed on probation, during or at the end of the period of his probation, in accordance with the terms of his appointment or the rules and orders governing such probation.

3. **Amendment of rule 10**,- (1) In rule 10 of the said rules,-

*(i)* for sub-rule (5), the following shall be substituted, namely,-

"(5) (a) Notwithstanding anything contained in sub-rule (3), where a competent authority in an organisation authorised to investigate cases against Government servants under the provisions of the Prevention of Corruption Act, 1988 (Central Act No. 49 of 1988) or the Karnataka Lokayukta Act, 1984 (Karnataka Act 4 of 1985) finds during investigation that there is a prima facie evidence against a Government servant and recommends that he may be placed under suspension, the authority competent to place such a Government servant under suspension shall forthwith place him under suspension.

(b) An order placing a Government servant under suspension shall be deemed to have been revoked automatically either with effect from the date of service of articles of charge under sub-rule (4) of rule 11 or the date of service of notice informing him of the proposal to take action against him under clause (a) of sub-rule (1) of rule 12 or in criminal proceedings, with effect from the date charge sheet is filed in the court of competent jurisdiction or at the end of a period of six months from the date of order of suspension, whichever is earlier. Upon such automatic revocation of the order of his suspension, it shall be the duty of the Government servant to immediately seek order of posting from the appointing authority, failing which he shall be deemed to be on unauthorised absence with effect from the date of automatic revocation of the order of his suspension.

Providedthat the authority competent to place a Government servant under suspension may extend the period of suspension beyond the period specified in this clause,only after consulting, within the said period, with the authority referred in clause (a) only ifsuch authority recommends extension within the said period. Otherwise, the order placing the Government servant under suspension shall stand revoked automatically under this clause.

(ii) Sub-rule (6) shall be omitted.

4. **Amendment of rule 12**,-(i) for clause (b) of sub rule (1) the following shall be substituted.

"(b) after examining the records and representation if any submitted by the Government Servant under clause (a), if the disciplinary authority comes to the conclusion that one or more of the penalties specified in clauses (v) to (viii) of rule 8 of these rule has to be imposed, it shall initiate the proceedings laid down in rule 11 of these rules."

(ii) Proviso to clause (b) of sub-rule (1)shall be omitted.

By Order and in the name of
the Governor of Karnataka

(CHANDRAHAS G. TALUKAR)
Deputy Secretary to Government,
Department of Personnel and Administrative
Reforms (Service rules-II)

## ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

**ಸಂಖ್ಯೆ: ಸಿಆಸುಇ 28 ಸೇಇವಿ 2018, ಬೆಂಗಳೂರು, ದಿನಾಂಕ: 02.05.2020**

## ಅಧಿಸೂಚನೆ

ಕರ್ನಾಟಕ ರಾಜ್ಯ ನಾಗರಿಕ ಸೇವಾ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ ಸಂಖ್ಯೆ 14)ರ 8ನೇ ಪ್ರಕರಣದೊಂದಿಗೆ ಓದಲಾದ 3ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ರಚಿಸಲು ಉದ್ದೇಶಿಸಿರುವ, ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ನ್ನು ಮತ್ತಷ್ಟು ತಿದ್ದುಪಡಿ ಮಾಡಲು, ಈ ಮುಂದಿನ ನಿಯಮಗಳ ಕರಡನ್ನು ಸದರಿ ನಿಯಮದ 3ನೇ ಪ್ರಕರಣದ (2)ನೇ ಉಪ-ಪ್ರಕರಣದ (ಎ) ಖಂಡದ ಮೂಲಕ ಅಗತ್ಯಪಡಿಸಿರುವಂತೆ ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಿದೆ ಮತ್ತು ಅದು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಿಂದ ಹದಿನೈದು ದಿನಗಳ ತರುವಾಯ ಸದರಿ ಕರಡನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ತಿಳುವಳಿಕೆ ನೀಡಲಾಗಿದೆ.

ಮೇಲೆ ನಿರ್ದಿಷ್ಟಪಡಿಸಿದ ಅವಧಿಯ ಮುಕ್ತಾಯಕ್ಕೆ ಮುಂಚೆ, ಸದರಿ ಕರಡಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಸದರಿ ವ್ಯಕ್ತಿಗಳಿಂದ ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸುತ್ತದೆ. ಆಕ್ಷೇಪಣೆಗಳನ್ನು ಹಾಗೂ ಸಲಹೆಗಳನ್ನು ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನಸೌಧ, ಬೆಂಗಳೂರು-560001 ಇವರಿಗೆ ಕಳುಹಿಸಬಹುದು.

## ಕರಡು ನಿಯಮಗಳು

**1. ಶೀರ್ಷಿಕೆ ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) (ತಿದ್ದುಪಡಿ) ನಿಯಮಗಳು, 2020 ಎಂದು ಕರೆಯತಕ್ಕದ್ದು.

(2) ಅವುಗಳನ್ನು ಅಧಿಕೃತ ರಾಜ್ಯಪತ್ರದಲ್ಲಿ ಅಂತಿಮವಾಗಿ ಪ್ರಕಟಿಸಿದ ದಿನಾಂಕದಿಂದ ಅವುಗಳು ಜಾರಿಗೆ ಬರತಕ್ಕದ್ದು.

2. **ನಿಯಮ 8ರ ತಿದ್ದುಪಡಿ.-** ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರಲ್ಲಿ (ಇವುಗಳನ್ನು ಇನ್ನು ಮುಂದೆ "ಸದರಿ ನಿಯಮಗಳು" ಎಂದು ಉಲ್ಲೇಖಿಸಲಾಗಿದೆ) 8ನೇ ನಿಯಮಕ್ಕೆ ಬದಲಾಗಿ, ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ,-

**"8. ದಂಡನೆಗಳ ಸ್ವರೂಪ.-** ತಕ್ಕುದಾದ ಮತ್ತು ಸಾಕಷ್ಟು ಕಾರಣಗಳಿಗಾಗಿ ಮತ್ತು ಇಲ್ಲಿ ಇನ್ನು ಮುಂದೆ ಉಪಬಂಧಿಸಿದಂತೆ, ಸರ್ಕಾರಿ ನೌಕರರ ಮೇಲೆ ಈ ಮುಂದಿನ ಒಂದು ಅಥವಾ ಹೆಚ್ಚು ದಂಡನೆಗಳನ್ನು ವಿಧಿಸಬಹುದು, ಎಂದರೆ,-

**(1) ಲಘು ದಂಡನೆಗಳು:**

(i) ಸಮೂಹ-'ಡಿ' ರಲ್ಲಿನ ಹುದ್ದೆಗಳನ್ನು ಹೊಂದಿರುವ ಸರ್ಕಾರಿ ನೌಕರರಿಗೆ ಸಂಬಂಧಿಸಿದಂತೆ, ಜುಲ್ಮಾನೆ;

(ii) ವಾಗ್ದಂಡನೆ;

(iii) ಸಂಚಿತ ಪರಿಣಾಮವಿಲ್ಲದೆ ವಾರ್ಷಿಕ ವೇತನ ಬಡ್ತಿಗಳನ್ನು ತಡೆಹಿಡಿಯುವುದು;

**ವಿವರಣೆ:** ಖಂಡ (iii)ರ ಉದ್ದೇಶಗಳಿಗಾಗಿ "ವಾರ್ಷಿಕ ವೇತನ ಬಡ್ತಿ"ಗಳೆಂದರೆ, ಸರ್ಕಾರಿ ನೌಕರನಿಗೆ ಭವಿಷ್ಯದಲ್ಲಿ ಲಭ್ಯವಾಗುವ ವಾರ್ಷಿಕ ವೇತನ ಬಡ್ತಿಗಳು ಮತ್ತು "ಸಂಚಿತ ಪರಿಣಾಮವಿಲ್ಲದೆ" ಎಂದರೆ, ವೇತನ ಬಡ್ತಿಗಳನ್ನು ತಡೆಹಿಡಿಯುವ ದಂಡನೆಯ ಅವಧಿಯು ಮುಕ್ತಾಯವಾದ ನಂತರ, ಆ ದಂಡನೆಯನ್ನು ಅವನ ಮೇಲೆ ವಿಧಿಸಿರುವುದಿಲ್ಲವೆಂದು ಭಾವಿಸಿ ಆತನ ವೇತನವನ್ನು ಭವಿಷ್ಯವರ್ತಿಯಾಗಿ ನಿಗದಿಪಡಿಸತಕ್ಕದ್ದು ಹಾಗೂ ತಡೆಹಿಡಿಯಲಾದ ವಾರ್ಷಿಕ ವೇತನ ಬಡ್ತಿಗಳ ಮೊತ್ತವನ್ನು ಅವನಿಗೆ ಮರುಪಾವತಿಸತಕ್ಕದ್ದಲ್ಲ.

(iii-ಎ) ಮುಂಬಡ್ತಿಯನ್ನು ತಡೆಹಿಡಿಯುವುದು;

(iv) ರಾಜ್ಯ ಸರ್ಕಾರಕ್ಕೆ ಅಥವಾ ಕೇಂದ್ರ ಸರ್ಕಾರಕ್ಕೆ ಅಥವಾ ಯಾವುದೇ ಇತರ ರಾಜ್ಯ ಸರ್ಕಾರಕ್ಕೆ ಅಥವಾ ಯಾವುದೇ ವ್ಯಕ್ತಿಗೆ, ನಿಕಾಯಕ್ಕೆ ಅಥವಾ ಪ್ರಾಧಿಕಾರಕ್ಕೆ ಸರ್ಕಾರಿ ನೌಕರನ ಸೇವೆಯನ್ನು ಎರವಲು ನೀಡಲಾಗಿದ್ದು, ಅವುಗಳಿಗೆ, ಅವನ ನಿರ್ಲಕ್ಷ್ಯತನದಿಂದ ಅಥವಾ ಆದೇಶಗಳ ಉಲ್ಲಂಘನೆಯಿಂದ ಉಂಟಾದ ಯಾವುದೇ ಹಣಕಾಸಿನ ನಷ್ಟವನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಆತನ ವೇತನದಿಂದ ವಸೂಲಿ ಮಾಡುವುದು;

**ಟಿಪ್ಪಣಿ:** "ಹಣಕಾಸಿನ ನಷ್ಟ" ಎಂದರೆ, ಸರ್ಕಾರಿ ನೌಕರನಿಂದ ಉಂಟಾದ ಹಣಕಾಸಿನ ನಷ್ಟ ಮತ್ತು ಅಂಥಹ ನಷ್ಟ ಉಂಟು ಮಾಡಿದ ದಿನಾಂಕದಿಂದ ವಾರ್ಷಿಕ ಶೇಕಡ ಎಂಟರಂತೆ ಬಡ್ಡಿಯೂ ಒಳಗೊಂಡಿರುತ್ತದೆ ಎಂದು ಅರ್ಥೈಸಿಕೊಳ್ಳತಕ್ಕದ್ದು.

(iv-ಎ) ಸರ್ಕಾರಿ ನೌಕರನು ಕಾಲಿಕ ವೇತನ ಶ್ರೇಣಿಯಲ್ಲಿ ಪ್ರಸ್ತುತ ಪಡೆಯುತ್ತಿರುವ ಮೂಲ ವೇತನವನ್ನು ಸಂಚಿತ ಪರಿಣಾಮರಹಿತವಾಗಿ ಒಂದು ನಿರ್ದಿಷ್ಟ ಅವಧಿಗೆ ಪ್ರಸ್ತುತ ಹಂತದಿಂದ ಕೆಳಗಿನ ಹಂತಕ್ಕೆ ಇಳಿಸುವುದು. ಆ ರೀತಿ ವೇತನವನ್ನು ಇಳಿಸಿದ ಅವಧಿಯಲ್ಲಿ ಸರ್ಕಾರಿ ನೌಕರನು ವಾರ್ಷಿಕ ವೇತನ ಬಡ್ತಿಗಳನ್ನು ಪಡೆಯಲು ಅರ್ಹನಲ್ಲ ಮತ್ತು ಆತನ ಮೂಲ ವೇತನವು ಸ್ಥಿರವಾಗಿರತಕ್ಕದ್ದು.

**ವಿವರಣೆ:** ಖಂಡ (iv-ಎ)ರ ಉದ್ದೇಶಗಳಿಗಾಗಿ 'ಹಂತ' ಎಂದರೆ ಕಾಲಿಕ ವೇತನ ಶ್ರೇಣಿಯಲ್ಲಿನ ವಾರ್ಷಿಕ ವೇತನ ಬಡ್ತಿಯ ಹಂತ ಮತ್ತು "ಸಂಚಿತ ಪರಿಣಾಮ ರಹಿತವಾಗಿ" ಎಂದರೆ, ಮೂಲ ವೇತನವನ್ನು ಕೆಳಗಿನ ಹಂತಕ್ಕೆ ಇಳಿಸುವ ದಂಡನೆಯ ಅವಧಿಯು ಮುಕ್ತಾಯವಾದ ಮೇಲೆ, ಆ ದಂಡನೆಯನ್ನು ಪರಿಗಣಿಸದೇ ಸರ್ಕಾರಿ ನೌಕರನ ವೇತನವನ್ನು ನಿಗದಿಪಡಿಸತಕ್ಕದ್ದು ಅಂದರೆ, ಸದರಿ ದಂಡನೆಯನ್ನು ವಿಧಿಸಿಲ್ಲವೆಂದು ಭಾವಿಸಿ ಆತನ ವೇತನವನ್ನು ನಿಗದಿಪಡಿಸತಕ್ಕದ್ದು ಹಾಗೂ ದಂಡನೆಯ ಪರಿಣಾಮವಾಗಿ ತಡೆಹಿಡಿಯಲಾದ ವೇತನದ ಮೊತ್ತವನ್ನು ಆತನಿಗೆ ಮರುಪಾವತಿಸತಕ್ಕದ್ದಲ್ಲ.

**(2) ಕಠಿಣ ದಂಡನೆಗಳು:**

(v) ಸರ್ಕಾರಿ ನೌಕರನು ಕಾಲಿಕ ವೇತನ ಶ್ರೇಣಿಯಲ್ಲಿ ಪ್ರಸ್ತುತ ಪಡೆಯುತ್ತಿರುವ ಮೂಲ ವೇತನವನ್ನು ಸಂಚಿತ ಪರಿಣಾಮಸಹಿತವಾಗಿ ಒಂದು ನಿರ್ದಿಷ್ಟ ಅವಧಿಗೆ ಕೆಳಗಿನ ಹಂತಕ್ಕೆ ಇಳಿಸುವುದು. ಆ ರೀತಿ ವೇತನವನ್ನು ಇಳಿಸಿದ ಅವಧಿಯಲ್ಲಿ ಸರ್ಕಾರಿ ನೌಕರನು ವಾರ್ಷಿಕ ವೇತನ ಬಡ್ತಿಗಳನ್ನು ಪಡೆಯಲು ಅರ್ಹನಲ್ಲ ಮತ್ತು ಆತನ ಮೂಲ ವೇತನವು ಸ್ಥಿರವಾಗಿರತಕ್ಕದ್ದು.

**ವಿವರಣೆ:** ಖಂಡ (v)ರ ಉದ್ದೇಶಗಳಿಗಾಗಿ, "ಸಂಚಿತ ಪರಿಣಾಮ ಸಹಿತವಾಗಿ" ಎಂದರೆ, ಮೂಲ ವೇತನವನ್ನು ಕೆಳಗಿನ ಹಂತಕ್ಕೆ ಇಳಿಸುವ ದಂಡನೆಯ ಅವಧಿಯು ಮುಕ್ತಾಯವಾದ ಮೇಲೆ, ವೇತನವನ್ನು ಇಳಿಸುವ ಆ ದಂಡನೆಯನ್ನು ಪರಿಗಣಿಸಿ ಸರ್ಕಾರಿ ನೌಕರನ ವೇತನವನ್ನು ನಿಗದಿಪಡಿಸತಕ್ಕದ್ದು. ಅಂದರೆ, ದಂಡನೆಯನ್ನು ವಿಧಿಸುವ ಸಮಯದಲ್ಲಿದ್ದ ಆತನ ಮೂಲ ವೇತನ ಯಾವ ಹಂತದಲ್ಲಿತ್ತೋ ಅದೇ ಹಂತಕ್ಕೆ ನಿಗದಿಪಡಿಸಕ್ಕದ್ದು.

(v-ಎ) ಸಂಚಿತ ಪರಿಣಾಮ ಸಹಿತವಾಗಿ ವಾರ್ಷಿಕ ವೇತನ ಬಡ್ತಿಗಳನ್ನು ತಡೆಹಿಡಿಯುವುದು.

**ವಿವರಣೆ:** ಖಂಡ (v-ಎ)ರ ಉದ್ದೇಶಗಳಿಗಾಗಿ, "ವಾರ್ಷಿಕ ವೇತನ ಬಡ್ತಿ"ಗಳೆಂದರೆ, ಸರ್ಕಾರಿ ನೌಕರನಿಗೆ ಭವಿಷ್ಯದಲ್ಲಿ ಲಭ್ಯವಾಗುವ ವಾರ್ಷಿಕ ವೇತನ ಬಡ್ತಿಗಳು ಮತ್ತು "ಸಂಚಿತ ಪರಿಣಾಮ ಸಹಿತವಾಗಿ" ಎಂದರೆ, ತಡೆಹಿಡಿದಿರುವ ವೇತನ ಬಡ್ತಿಗಳ ದಂಡನೆಯ ಅವಧಿಯು ಮುಕ್ತಾಯವಾದ ಮೇಲೆ, ಆ ದಂಡನೆಯನ್ನು ಪರಿಗಣಿಸಿ ಆತನ ವೇತನವನ್ನು ನಿಗದಿಪಡಿಸತಕ್ಕದ್ದು. ಅಂದರೆ, ತಡೆಹಿಡಿದಿರುವ ವಾರ್ಷಿಕ ವೇತನ ಬಡ್ತಿಗಳ ಬಿಡುಗಡೆಗಾಗಿ ಆತನು ಹಕ್ಕುಳ್ಳವನಾಗಿರುವುದಿಲ್ಲ ಹಾಗೂ ದಂಡನಾ ಅವಧಿಯ ಮುಕ್ತಾಯದ ನಂತರ ಆತನು ದಂಡನೆಯನ್ನು ವಿಧಿಸುವ ಸಮಯದಲ್ಲಿ ಪಡೆಯುತ್ತಿದ್ದ ವೇತನದ ಹಂತದಿಂದ ವಾರ್ಷಿಕ ವೇತನ ಬಡ್ತಿಗಳನ್ನು ಪಡೆಯುವುದು.

(v-ಬಿ) ದಂಡನೆಯನ್ನು ವಿಧಿಸುವ ಆದೇಶದಲ್ಲಿ ಸರ್ಕಾರಿ ನೌಕರನನ್ನು ನಿರ್ದಿಷ್ಟಪಡಿಸುವ ಅವಧಿಗಾಗಿ ಕೆಳಗಿನ ಹುದ್ದೆಗೆ ಇಳಿಸುವುದು. ಕೆಳಗಿನ ಹುದ್ದೆಗೆ ಇಳಿಸುವ ದಂಡನೆಗೆ ಒಳಗಾದ ಸರ್ಕಾರಿ ನೌಕರನ ವೇತನವನ್ನು, ಆ ದಂಡನೆಯನ್ನು

ವಿಧಿಸುವ ಸಂದರ್ಭದಲ್ಲಿ ಆತನು ಹೊಂದಿದ್ದ ಹುದ್ದೆಯ ವೇತನ ಶ್ರೇಣಿಯಲ್ಲಿ ಪಡೆಯುತ್ತಿದ್ದ ವೇತನದ ಹಂತದಲ್ಲಿಯೇ ಕೆಳಗಿನ ಹುದ್ದೆಯ ವೇತನ ಶ್ರೇಣಿಯಲ್ಲಿ ಸಮೀಕರಿಸಿ ನಿಗದಿಪಡಿಸತಕ್ಕದ್ದು. ದಂಡನೆಯು ಜಾರಿಯಲ್ಲಿರುವ ಅವಧಿಯಲ್ಲಿ ಆತನು ವಾರ್ಷಿಕ ವೇತನ ಬಡ್ತಿಗಳಿಗೆ ಅರ್ಹನಾಗುವುದಿಲ್ಲ. ಅಲ್ಲದೇ, ದಂಡನೆಯನ್ನು ವಿಧಿಸುವ ಸಂದರ್ಭದಲ್ಲಿ ಆತನು ಯಾವ ಹುದ್ದೆಯನ್ನು ಹೊಂದಿದ್ದನೋ ಅದೇ ಹುದ್ದೆಯ ಜೇಷ್ಠತಾ ಪಟ್ಟಿಯಲ್ಲಿ ಆತನ ಜೇಷ್ಠತೆಯು ಉಳಿಯುತ್ತದೆ ಮತ್ತು ಅದೇ ಜೇಷ್ಠತೆಯು ಮುಂದುವರಿಯುತ್ತದೆ. ಆದರೆ, ಆ ಜೇಷ್ಠತೆಯ ಆಧಾರದ ಮೇಲೆ ದಂಡನೆಯ ಅವಧಿಯಲ್ಲಿ ಆತನು ಮುಂದಿನ ಹುದ್ದೆಗೆ ಮುಂಬಡ್ತಿ ಹೊಂದಲು ಅರ್ಹನಾಗತಕ್ಕದ್ದಲ್ಲ. ಕೆಳಗಿನ ಹುದ್ದೆಗೆ ಇಳಿಸುವ ದಂಡನೆಯ ಅವಧಿಯು ಮುಗಿದ ನಂತರ, ಆತನನ್ನು ಯಾವ ಹುದ್ದೆಯಿಂದ ಕೆಳಗಿನ ಹುದ್ದೆಗೆ ಇಳಿಸಲಾಗಿತ್ತೋ, ಆ ಹುದ್ದೆಯಲ್ಲಿ ಸ್ವಯಂಚಾಲಿತವಾಗಿ ಪುನರ್ ಸ್ಥಾಪಿತವಾಗಲು ಹಕ್ಕುಳ್ಳವನಾಗುತ್ತಾನೆ. ಆದರೆ, ಆತನು ಪೂರ್ವಾನ್ವಯ ಮುಂಬಡ್ತಿಗೆ ಹಕ್ಕುಳ್ಳವನಾಗುವುದಿಲ್ಲ.

ಪರಂತು, ಈ ಖಂಡದಡಿ ಸರ್ಕಾರಿ ನೌಕರನನ್ನು ಆತನು ಪ್ರಥಮವಾಗಿ ನೇಮಕಗೊಂಡಿದ್ದ ಹುದ್ದೆಗಿಂತ ಕೆಳಗಿನ ಹುದ್ದೆಗೆ ಇಳಿಸತಕ್ಕದ್ದಲ್ಲ.

(vi) **ಕಡ್ಡಾಯ ನಿವೃತ್ತಿಗೊಳಿಸುವುದು**. ಈ ಖಂಡದಡಿ ಕಡ್ಡಾಯ ನಿವೃತ್ತಿಯ ದಂಡನೆಗೆ ಒಳಗಾದ ಸರ್ಕಾರಿ ನೌಕರನು ದಂಡನೆ ವಿಧಿಸಿದ ಆದೇಶದ ದಿನಾಂಕದವರೆಗೆ ಆತನು ಸಲ್ಲಿಸಿದ ಸೇವೆಗೆ ಅನುಗುಣವಾಗಿ ಸಂಬಂಧಿಸಿದ ನಿಯಮಾನುಸಾರ ನಿವೃತ್ತಿ ಸೌಲಭ್ಯಗಳಿಗೆ ಅರ್ಹನಾಗುತ್ತಾನೆ.

(vii) **ಸೇವೆಯಿಂದ ತೆಗೆದು ಹಾಕುವುದು**. ಈ ಖಂಡದಡಿ ಸೇವೆಯಿಂದ ತೆಗೆದುಹಾಕಲ್ಪಟ್ಟ ದಂಡನೆಗೆ ಒಳಗಾದ ಸರ್ಕಾರಿ ನೌಕರನು ಯಾವುದೇ ಪಿಂಚಣಿ ಸೌಲಭ್ಯಗಳಿಗೆ ಅರ್ಹನಾಗುವುದಿಲ್ಲ. ಆದರೆ, ಈ ಖಂಡದಡಿ ಸೇವೆಯಿಂದ ತೆಗೆದುಹಾಕಲ್ಪಟ್ಟ ದಂಡನೆಗೆ ಒಳಗಾದ ಸರ್ಕಾರಿ ನೌಕರನು ಭವಿಷ್ಯದಲ್ಲಿ ರಾಜ್ಯ ಸಿವಿಲ್ ಸೇವೆಗಳಿಗೆ ನೇಮಕವಾಗಲು ಅನರ್ಹನಾಗುವುದಿಲ್ಲ.

(viii) **ಸೇವೆಯಿಂದ ವಜಾ ಮಾಡುವುದು**. ಈ ಖಂಡದಡಿ ಸೇವೆಯಿಂದ ವಜಾಗೊಳಿಸಲ್ಪಟ್ಟ ದಂಡನೆಗೆ ಒಳಗಾದ ಸರ್ಕಾರಿ ನೌಕರನು ಯಾವುದೇ ಪಿಂಚಣಿ ಸೌಲಭ್ಯಗಳಿಗೆ ಅರ್ಹನಾಗುವುದಿಲ್ಲ. ಈ ಖಂಡದಡಿ ಸೇವೆಯಿಂದ ವಜಾಗೊಳಿಸಲ್ಪಟ್ಟ ದಂಡನೆಗೆ ಒಳಗಾದ ಸರ್ಕಾರಿ ನೌಕರನು, ಸಾಮಾನ್ಯವಾಗಿ, ಭವಿಷ್ಯದಲ್ಲಿ ರಾಜ್ಯ ಸಿವಿಲ್ ಸೇವೆಗಳಿಗೆ ನೇಮಕವಾಗಲು ಅನರ್ಹನಾಗುತ್ತಾನೆ.

ಪರಂತು, ಶಿಸ್ತು ಪ್ರಾಧಿಕಾರದ ಆದೇಶದಲ್ಲಿ ವಿಶೇಷವಾದ ಮತ್ತು ಸಾಕಷ್ಟು ಪ್ರಮಾಣದಲ್ಲಿ ವ್ಯತಿರಿಕ್ತವಾದ ಕಾರಣಗಳನ್ನು ನಮೂದಿಸದಿದ್ದಲ್ಲಿ, ರುಜುವಾತಾದ ಭ್ರಷ್ಟಾಚಾರದ ಆರೋಪಕ್ಕಾಗಿ (vi)ರಿಂದ (viii)ರವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳನ್ನು ಹೊರತುಪಡಿಸಿ, ಯಾವುದೇ ದಂಡನೆಯನ್ನು ವಿಧಿಸತಕ್ಕದ್ದಲ್ಲ.

**ವಿವರಣೆ-1:** ಖಂಡ (viii)ರ ಉದ್ದೇಶಗಳಿಗಾಗಿ, "ಭ್ರಷ್ಟಾಚಾರ" ಎಂಬ ಪದಾವಳಿಯು, ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, 1988 (1988ರ ಕೇಂದ್ರ ಅಧಿನಿಯಮ 49)ರ 13ನೇ ಪ್ರಕರಣದಲ್ಲಿ "ಸಾರ್ವಜನಿಕ ನೌಕರನಿಂದ ಆಪರಾಧಿಕ ದುರ್ನಡತೆ" ಎಂಬ ಪದಾವಳಿಗೆ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದ್ದು.

ಮತ್ತೂ ಪರಂತು, ಈ ನಿಯಮಗಳಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಒಂದು ಪ್ರಕರಣದಲ್ಲಿ ದುರ್ನಡತೆ ಅಥವಾ ದುರ್ವರ್ತನೆಯ ಆರೋಪಗಳ ಸ್ವರೂಪವು ಈ ಕೆಳಗಿನ ಕೋಷ್ಟಕದ (2)ನೇ ಅಂಕಣದಲ್ಲಿನ ದೃಷ್ಟಾಂತಗಳಿಗೆ ಹೋಲಿಕೆ ಮಾಡುವಂತಹವಾಗಿದ್ದರೆ, ಆ ಆಪಾದನೆಗಳಿಗೆ ಸಂಬಂಧಿಸಿದಂತೆ ತೆಗೆದುಕೊಳ್ಳಬಹುದಾದ ಅದರ ನಿರ್ಣಯಗಳನ್ನು ಗಮನದಲ್ಲಿಟ್ಟುಕೊಂಡು, ಶಿಸ್ತು ಪ್ರಾಧಿಕಾರವು ಈ ನಿಯಮದ (i)ರಿಂದ (viii)ರ ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿರುವ ಒಂದು ಅಥವಾ ಹೆಚ್ಚು ದಂಡನೆಗಳನ್ನು ಸರ್ಕಾರಿ ನೌಕರನ ಮೇಲೆ ವಿಧಿಸಬಹುದೆಂದು ಅಭಿಪ್ರಾಯಪಟ್ಟ ಸಂದರ್ಭದಲ್ಲಿ ಅದಕ್ಕೆ ಸಂವಾದಿಯಾಗಿ ಅಂಕಣ (3)ರಲ್ಲಿ ನಿರ್ಧಿಷ್ಟಪಡಿಸಿದಂತಹ **ಸೂಚ್ಯಾತ್ಮಕ** ದಂಡನೆ ಅಥವಾ ದಂಡನೆಗಳನ್ನು ವಿಧಿಸಿ ಆದೇಶವನ್ನು ಹೊರಡಿಸಬಹುದು:

**<u>ಕೋಷ್ಟಕ</u>**

| ಕ್ರ. ಸಂ. | ಸಾಬೀತಾದಂತಹಆರೋಪಗಳಸ್ವರೂಪ | ವಿಧಿಸಬಹುದಾದಸೂಚ್ಯಾತ್ಮಕದಂಡನೆಗಳು |
|---|---|---|
| 1. | ಒಂದು ತಿಂಗಳಿಗೆ ಮೇಲ್ಪಟ್ಟು, ಆದರೆ ನಾಲ್ಕು ತಿಂಗಳಿಗಿಂತ ಕಡಿಮೆ ಅವಧಿಯ ಅನಧಿಕೃತ ಗೈರುಹಾಜರಿ. | ಮೂರು ವಾರ್ಷಿಕ ವೇತನಬಡ್ತಿಗಳನ್ನು ತಡೆಹಿಡಿಯುವುದು. |
| 2. | ನಾಲ್ಕು ತಿಂಗಳು ಮೀರಿದ ಅನಧಿಕೃತ ಗೈರುಹಾಜರಿ. | ಸೇವೆಯಿಂದ ತೆಗೆದುಹಾಕುವುದು.. |
| 3. | ರೂ. 10,000/- ಕ್ಕಿಂತ ಕಡಿಮೆ ಮೊತ್ತದ ತಾತ್ಕಾಲಿಕ ಹಣ ದುರುಪಯೋಗ. | 5 ವಾರ್ಷಿಕ ವೇತನ ಬಡ್ತಿಗಳನ್ನು ತಡೆಹಿಡಿಯುವುದು. |
| 4. | ರೂ. 10,000/-ಕ್ಕಿಂತ ಅಧಿಕ ಮೊತ್ತದ ತಾತ್ಕಾಲಿಕ ಹಣ ದುರುಪಯೋಗ. | ಹುದ್ದೆಯ ಕಾಲಿಕ ವೇತನ ಶ್ರೇಣಿಯ ಕೆಳಗಿನ ಹಂತಕ್ಕೆ ವೇತನವನ್ನು ಇಳಿಸುವುದು.<br>(ಸರ್ಕಾರಿ ನೌಕರನು ಪಡೆಯುತ್ತಿರುವ ಮೂಲ ವೇತನವನ್ನು ಸಂಚಿತ ಪರಿಣಾಮದೊಂದಿಗೆ ನಿರ್ದಿಷ್ಟ ಅವಧಿಗಾಗಿ ಕಾಲಿಕ ವೇತನ ಶ್ರೇಣಿಯ ಪ್ರಸ್ತುತ ಹಂತದಿಂದ ಕೆಳಗಿನ ಹಂತಕ್ಕೆ ಇಳಿಸುವುದು.) |
| 5. | ಸರ್ಕಾರಿ ಹಣದ ದುರುಪಯೋಗ/ ತಪ್ಪುಬಳಕೆ | ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿ. |
| 6. | ಕಾರ್ಯವಿಧಾನದ ಲೋಪಗಳು. | ಮೊದಲ ಸಂದರ್ಭದಲ್ಲಿ ವಾಗ್ದಂಡನೆ. ಎರಡನೇ |

| | | |
|---|---|---|
| | | ಮತ್ತು ನಂತರದ ಸಂದರ್ಭಗಳಲ್ಲಿ ಕಾಲಿಕ ವೇತನ ಶ್ರೇಣಿಯಲ್ಲಿ ಕೆಳಗಿನ ಹಂತಕ್ಕೆ ಇಳಿಸುವುದು. |
| 7. | ಕಛೇರಿ ಕಾರ್ಯವಿಧಾನ ಕೈಪಿಡಿ ಇತ್ಯಾದಿಯಲ್ಲಿ ನಿರ್ದಿಷ್ಟಪಡಿಸಿರುವ ಕಾಲಮಿತಿಯ ಸಕಾರಣವಲ್ಲದ (ಅಸಮಂಜಸ) ವಿಳಂಬ. | ಮೊದಲ ಸಂದರ್ಭದಲ್ಲಿ ವಾಗ್ದಂಡನೆ. ಎರಡನೇ ಮತ್ತು ನಂತರದ ಸಂದರ್ಭಗಳಲ್ಲಿ ಕನಿಷ್ಠ ಒಂದು ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿಯುವುದು. |
| 8. | ಲೈಂಗಿಕ ಕಿರುಕುಳ. | ಕೆಳಮಟ್ಟದ ಹುದ್ದೆಗೆ ಇಳಿಸುವುದು. |
| 9. | ಮೇಲಧಿಕಾರಿಗಳ ಲಿಖಿತ ಸೂಚನೆಗಳನ್ನು ಪಾಲಿಸಲು ನಿರಾಕರಣೆ | ಎರಡು ವಾರ್ಷಿಕ ಬಡ್ತಿಗಳನ್ನು ತಡೆಹಿಡಿಯುವುದು. |
| 10. | ಕುಟುಂಬದ ಸದಸ್ಯರೊಬ್ಬರಿಗೆ ಯಾವುದೇ ಕಂಪನಿ ಅಥವಾ ಸಂಸ್ಥೆಯಲ್ಲಿ ಉದ್ಯೋಗ ಗಳಿಸಿಕೊಳ್ಳಲು ಅಧಿಕಾರ ಸ್ಥಾನವನ್ನು ಉಪಯೋಗಿಸಿಕೊಳ್ಳುವುದು ಅಥವಾ ವರ್ಚಸ್ಸನ್ನು ಬೀರುವುದು. | ಕಾಲಿಕ ವೇತನ ಶ್ರೇಣಿಯಲ್ಲಿನ ಕೆಳಗಿನ ಹಂತಕ್ಕೆ ವೇತನವನ್ನು ಇಳಿಸುವುದು.<br>(ಸರ್ಕಾರಿ ನೌಕರನು ಪಡೆಯುತ್ತಿರುವ ಮೂಲ ವೇತನವನ್ನು ಸಂಚಿತ ಪರಿಣಾಮವಿಲ್ಲದೆ ನಿರ್ದಿಷ್ಟ ಅವಧಿಗಾಗಿ ಕಾಲಿಕ ವೇತನ ಶ್ರೇಣಿಯ ಪ್ರಸ್ತುತ ಹಂತದಿಂದ ಕೆಳಗಿನ ಹಂತಕ್ಕೆ ಇಳಿಸುವುದು.) |
| 11. | ಅಧಿಕೃತ ಕರ್ತವ್ಯಗಳನ್ನು ನಿರ್ವಹಿಸುವುದರಲ್ಲಿ ಸರ್ಕಾರಿ ನೌಕರನ ಅಥವಾ ಆತನ ಕುಟುಂಬದ ಸದಸ್ಯರ ಸ್ವಹಿತಾಸಕ್ತಿ ಒಳಗೊಂಡ ಯಾವುದೇ ಕಂಪನಿ ಅಥವಾ ಸಂಸ್ಥೆಗೆ ಅಥವಾ ಒಬ್ಬ ವ್ಯಕ್ತಿಗೆ ಸಂಬಂಧಿಸಿದಂತೆ ವ್ಯವಹರಿಸುವುದು ಅಥವಾ ಯಾವುದೇ ಗುತ್ತಿಗೆಯನ್ನು ಕೊಡುವುದು ಅಥವಾ ಮಂಜೂರು ಮಾಡುವುದು. | ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿ. |
| 12. | ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ರಲ್ಲಿನ ಉಪಬಂಧಗಳನ್ನು ಉಲ್ಲಂಘಿಸಿ ರಾಜಕೀಯ ಅಥವಾ ಚುನಾವಣೆಗಳಲ್ಲಿ ಭಾಗವಹಿಸುವುದು. | ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿ. |
| 13. | ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ರಲ್ಲಿನ ಉಪಬಂಧಗಳನ್ನು ಉಲ್ಲಂಘಿಸಿ ಮುಷ್ಕರ ಅಥವಾ ಪ್ರದರ್ಶನಗಳಲ್ಲಿ ಭಾಗವಹಿಸುವುದು. | ಕಾಲಿಕ ವೇತನ ಶ್ರೇಣಿಯಲ್ಲಿ ಕೆಳಗಿನ ಹಂತಕ್ಕೆ ವೇತನವನ್ನು ಇಳಿಸುವುದು. |
| 14. | ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ರಲ್ಲಿನ ಉಪಬಂಧಗಳನ್ನು ಉಲ್ಲಂಘಿಸಿ ಆಕಾಶವಾಣಿ, ಪತ್ರಿಕೆ, ದೂರದರ್ಶನ ಮೊದಲಾದ ಮಾಧ್ಯಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು. | ಕನಿಷ್ಠ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ತಡೆಹಿಡಿಯುವುದು. |
| 15. | ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ರ ಉಪಬಂಧಗಳನ್ನು ಉಲ್ಲಂಘಿಸಿ ಸರ್ಕಾರವನ್ನು ಟೀಕಿಸುವುದು. | ಕನಿಷ್ಠ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ತಡೆಹಿಡಿಯುವುದು. |
| 16. | ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ರ ಉಪಬಂಧಗಳನ್ನು ಉಲ್ಲಂಘಿಸಿ ವಂತಿಗೆಯನ್ನು ಸ್ವೀಕರಿಸುವುದು ಅಥವಾ ಬೇರೆ ರೀತಿಯಲ್ಲಿ ನಿಧಿ ಸಂಗ್ರಹಿಸಲು ನಿಧಿ ಸಂಗ್ರಹಣೆ | ಕಾಲಿಕ ವೇತನ ಶ್ರೇಣಿಯ ಕೆಳಗಿನ ಹಂತಕ್ಕೆ ವೇತನವನ್ನು ಇಳಿಸುವುದು. |

| | | |
|---|---|---|
| | ಕಾರ್ಯದಲ್ಲಿ ಪಾಲ್ಗೊಳ್ಳುವುದು, ಅಥವಾ ಇತರೆ ಸಂಗ್ರಹಣೆಗಳು ನಗದು ಅಥವಾ ಇತರೆ ರೂಪ. | |
| 17. | ವರದಕ್ಷಿಣೆಯನ್ನು ಕೊಡುವುದು/ ತೆಗೆದುಕೊಳ್ಳುವುದು ಅಥವಾ ತೆಗೆದುಕೊಳ್ಳುವುದಕ್ಕೆ/ ಕೊಡುವುದಕ್ಕೆ ಉತ್ತೇಜಿಸುವುದು. | ಸರ್ಕಾರಿ ಸೇವೆಯಿಂದ ತೆಗೆದುಹಾಕುವುದು |
| 18. | ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ರ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ವ್ಯವಹಾರ ಅಥವಾ ವ್ಯಾಪಾರಗಳಲ್ಲಿ ಅಥವಾ ಯಾವುದೇ ಉದ್ಯೋಗದಲ್ಲಿ ತೊಡಗಿಸಿಕೊಳ್ಳುವುದು. | ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿ. |
| 19. | ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ರ ಉಪಬಂಧಗಳನ್ನು ಉಲ್ಲಂಘಿಸಿ ಬಂಡವಾಳ ಹೂಡಿಕೆ ಮಾಡುವುದು, ಸಾಲವನ್ನು ಕೊಡುವುದು ಅಥವಾ ತೆಗೆದುಕೊಳ್ಳುವುದು. | ಕಾಲಿಕ ವೇತನ ಶ್ರೇಣಿಯ ಕೆಳಗಿನ ಹಂತಕ್ಕೆ ವೇತನವನ್ನು ಇಳಿಸುವುದು. |
| 20. | ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ರ ಉಪಬಂಧಗಳನ್ನು ಉಲ್ಲಂಘಿಸಿ ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿಯನ್ನು ಸಲ್ಲಿಸದಿರುವುದು. | ಕನಿಷ್ಠ ಒಂದು ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿಯುವುದು. |
| 21. | ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ರ ಉಪಬಂಧಗಳನ್ನು ಉಲ್ಲಂಘಿಸಿ ಚರ ಮತ್ತು ಸ್ಥಿರ ಆಸ್ತಿಗಳ ವ್ಯವಹಾರ. | ಒಂದು ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿಯುವುದು |
| 22. | ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ರ ಉಪಬಂಧಗಳನ್ನು ಉಲ್ಲಂಘಿಸಿ ಎರಡನೇ ಮದುವೆ ಮಾಡಿಕೊಳ್ಳುವುದು. | ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿ. |
| 23. | ಸರ್ಕಾರದ ಸ್ಥಾಯಿ ಸೂಚನೆಗಳಿಗೆ ವಿರುದ್ಧವಾಗಿ ಸಿನಿಮಾ, ನಾಟಕ ಮುಂತಾದವುಗಳಲ್ಲಿ ಭಾಗವಹಿಸುವುದು / ತೊಡಗಿಸಿಕೊಳ್ಳುವುದು. | ಎರಡು ವಾರ್ಷಿಕ ವೇತನ ಬಡ್ತಿಗಳನ್ನು ತಡೆಹಿಡಿಯುವುದು. |
| 24. | ಕರ್ನಾಟಕ ಸಿವಿಲ್ ಸೇವಾ (ಕಾರ್ಯನಿರ್ವಹಣಾ ವರದಿ) ನಿಯಮಗಳು, 2000ರ ಉಪಬಂಧಗಳನ್ನು ಉಲ್ಲಂಘಿಸಿ, ವಾರ್ಷಿಕ ಕಾರ್ಯನಿರ್ವಾಹಣಾ ವರದಿಯನ್ನು ಬರೆಯಲು ವಿಫಲರಾಗುವುದು. | ವಾಗ್ದಂಡನೆ (Censure). |

ಮತ್ತು ಪರಂತು ಶಿಸ್ತು ಪ್ರಾಧಿಕಾರವು ಲಿಖಿತದಲ್ಲಿ ದಾಖಲಿಸಬಹುದಾದ ಕಾರಣಗಳಿಗಾಗಿ, ದುರ್ನಡತೆ ಅಥವಾ ದುರ್ವರ್ತನೆಯ ಯಾವುದಾದರೂ ಅಥವಾ ಎಲ್ಲಾ ಆರೋಪಗಳ ಬಗ್ಗೆ ತೆಗೆದುಕೊಳ್ಳಲಾದ ತನ್ನ ನಿರ್ಣಯಗಳಂತೆ ಮೇಲೆ ನಮೂದಿಸಿದ ದಂಡನೆಗಳನ್ನು ಹೊರತುಪಡಿಸಿ ಕಡಿಮೆ ಅಥವಾ ಹೆಚ್ಚು ಕಠಿಣವಾದ ದಂಡನೆ ಅಥವಾ ದಂಡನೆಗಳನ್ನು ವಿಧಿಸಬಹುದು ಮತ್ತು ಆ ಆಪಾದನೆಗಳ ಸ್ವರೂಪವು (2)ನೇ ಅಂಕಣದಲ್ಲಿರುವ ದೃಷ್ಟಾಂತಗಳಿಗೆ ಹೋಲಿಕೆಯಾಗದಿದ್ದ ಸಂದರ್ಭದಲ್ಲಿ ಶಿಸ್ತು ಪ್ರಾಧಿಕಾರವು, ಈ ನಿಯಮದ (i) ರಿಂದ (viii)ರ ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಒಂದು ಅಥವಾ ಹೆಚ್ಚು ದಂಡನೆಗಳನ್ನು ವಿಧಿಸಿ ಆದೇಶಿಸಬಹುದು.

**ವಿವರಣೆ-2:** ಈ ಮುಂದಿನವುಗಳು ಈ ನಿಯಮದ ಅರ್ಥವ್ಯಾಪ್ತಿಯಲ್ಲಿ ದಂಡನೆಯಾಗತಕ್ಕದ್ದಲ್ಲ:

(i) ಕರ್ನಾಟಕ ಸಿವಿಲ್ ಸೇವಾ (ಸೇವೆಗಳು ಮತ್ತು ಕನ್ನಡ ಭಾಷಾ ಪರೀಕ್ಷೆ) ನಿಯಮಗಳು, 1974ರ ಅನುಸಾರವಾಗಿ ಕನ್ನಡ ಭಾಷಾ ಪರೀಕ್ಷೆ ಮತ್ತು ಸೇವಾ ಪರೀಕ್ಷೆಗಳಲ್ಲಿ ಉತ್ತೀರ್ಣನಾಗಲು ವಿಫಲನಾದ ಸರ್ಕಾರಿ ನೌಕರನ ವೇತನ ಬಡ್ತಿಗಳನ್ನು ತಡೆಹಿಡಿಯುವುದು;

(ii) ಮುಂಬಡ್ತಿಗಾಗಿ ಒಬ್ಬ ಸರ್ಕಾರಿ ನೌಕರನ ಪ್ರಕರಣವನ್ನು ಪರಿಶೀಲಿಸಿದ ತರುವಾಯ, ಮುಂಬಡ್ತಿಗೆ ಅರ್ಹನಲ್ಲನೆಂದು ಅಥವಾ ಸೂಕ್ತನಲ್ಲನೆಂದು ಕಂಡುಬಂದಾಗ ಹುದ್ದೆಯೊಂದಕ್ಕೆ ಮುಂಬಡ್ತಿ ನೀಡದಿರುವುದು;

(iii) ಆತನ ನಡತೆಗೆ ಸಂಬಂಧಿಸದೇ ಇರುವ ಆಡಳಿತ ಕಾರಣಗಳಿಗಾಗಿ, ಉದಾಹರಣೆಗೆ, ಹುದ್ದೆಯನ್ನು ಖಾಯಂ ಆಗಿ ಹೊಂದಿದ್ದವರು ರಜೆಯಿಂದ ಅಥವಾ ಪ್ರತಿನಿಯೋಜನೆಯಿಂದ ವಾಪಸ್ಸು ಬರುವುದು, ಕಾಲ್ಪನಿಕ ಅರ್ಹತಾ ದಿನಾಂಕವನ್ನು ನಿಗದಿ ಮಾಡಲು ಖಾಲಿ ಹುದ್ದೆಯು ಲಭ್ಯವಿಲ್ಲದಿರುವುದು ಮುಂತಾದ ಕಾರಣಗಳಿಗಾಗಿ ಒಬ್ಬ ಸರ್ಕಾರಿ ನೌಕರನನ್ನು ಉನ್ನತ ಹುದ್ದೆಯಿಂದ ಕೆಳಮಟ್ಟದ ಹುದ್ದೆಗೆ ಹಿಂಬಡ್ತಿಗೊಳಿಸುವುದು.

(iv) ಬೇರೊಂದು ಸೇವೆ ಅಥವಾ ಹುದ್ದೆಗೆ ಪರಿವೀಕ್ಷಣೆಯ ಮೇಲೆ ನೇಮಕವಾದ ಸರ್ಕಾರಿ ನೌಕರನನ್ನು ಆತನ ನೇಮಕಾತಿಯ ನಿಬಂಧನೆಗಳಿಗೆ ಅಥವಾ ಪರಿವೀಕ್ಷಣಾ ಅವಧಿಗೆ ಸಂಬಂಧಿಸಿದ ನಿಯಮ ಮತ್ತು ಆದೇಶಗಳಿಗನುಸಾರವಾಗಿ, ಪರಿವೀಕ್ಷಣಾ ಅವಧಿಯಲ್ಲಿ ಅಥವಾ ಆ ಅವಧಿಯ ಕೊನೆಯಲ್ಲಿ, ಅವನ ಖಾಯಂ ಸೇವೆ ಅಥವಾ ಹುದ್ದೆಗೆ ಹಿಂದಿರುಗಿಸುವುದು.

(v) ಅವನ ನಿವೃತ್ತಿ ವಯಸ್ಸಿಗೆ ಅಥವಾ ನಿವೃತ್ತಿಗೆ ಸಂಬಂಧಿಸಿದ ಉಪಬಂಧಗಳಿಗನುಸಾರವಾಗಿ ಒಬ್ಬ ಸರ್ಕಾರಿ ನೌಕರನ ಕಡ್ಡಾಯ ನಿವೃತ್ತಿ; ಮತ್ತು

(vi) (ಎ) ಒಪ್ಪಂದದಡಿ ಕೆಲಸಕ್ಕಿಟ್ಟುಕೊಳ್ಳಲಾದ ವ್ಯಕ್ತಿಯನ್ನು ಅಂಥ ಒಪ್ಪಂದದ ನಿಬಂಧನೆಗಳಿಗನುಸಾರವಾಗಿ; ಅಥವಾ

(ಬಿ) ಪರಿವೀಕ್ಷಣೆಯ ಮೇಲೆ ನೇಮಕಗೊಂಡ ಸರ್ಕಾರಿ ನೌಕರನನ್ನು ಅವನ ಪರಿವೀಕ್ಷಣಾ ಅವಧಿಯಲ್ಲಿ ಅಥವಾ ಅದರ ಕೊನೆಯಲ್ಲಿ, ಅವನ ನೇಮಕಾತಿಯ ನಿಬಂಧನೆಗಳಿಗೆ ಅಥವಾ ಅಂಥ ಪರಿವೀಕ್ಷಣೆಯನ್ನು ಕ್ರಮಗೊಳಿಸುವ ನಿಯಮ ಮತ್ತು ಆದೇಶಗಳಿಗನುಸಾರವಾಗಿ ಸೇವೆಯಿಂದ ಕೊನೆಗೊಳಿಸುವುದು:

3. **ನಿಯಮ 10ರ ತಿದ್ದುಪಡಿ**.- ಸದರಿ ನಿಯಮಗಳ 10ನೇ ನಿಯಮದಲ್ಲಿ,-

(i) ಉಪ-ನಿಯಮ(5)ಕ್ಕೆ ಬದಲಾಗಿ, ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ:-

" 5 (ಎ) ಉಪನಿಯಮ (3)ರಲ್ಲಿ ಏನೇ ಒಳಗೊಂಡಿದ್ದರೂ ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ 1988 (1988ರ ಕೇಂದ್ರ ಅಧಿನಿಯಮ ಸಂಖ್ಯೆ: 49) ಅಥವಾ ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984 (1985ರ ಕರ್ನಾಟಕ ಅಧಿನಿಯಮ 4) ರ ಉಪಬಂಧಗಳ ಮೇರೆಗೆ ಸರ್ಕಾರಿ ನೌಕರರ ವಿರುದ್ಧ ಪ್ರಕರಣಗಳನ್ನು ತನಿಖೆ ಮಾಡುವುದಕ್ಕೆ ಅಧಿಕೃತಗೊಂಡ ಸಂಸ್ಥೆಯಲ್ಲಿನ ಸಕ್ಷಮ ಪ್ರಾಧಿಕಾರವು ತನಿಖೆ ಮಾಡುವಾಗ ಒಬ್ಬ ಸರ್ಕಾರಿ ನೌಕರನ ವಿರುದ್ಧ ಮೇಲ್ನೋಟದ ಸಾಕ್ಷ್ಯವಿದೆ ಎಂದು ಕಂಡುಬಂದಲ್ಲಿ ಹಾಗೂ ಆತನನ್ನು ಅಮಾನತ್ತಿನಲ್ಲಿ ಇಡಬಹುದು ಎಂದು ಶಿಫಾರಸ್ಸು ಮಾಡಿದ್ದಲ್ಲಿ ಅಂತಹ ಸರ್ಕಾರಿ ನೌಕರನನ್ನು ಅಮಾನತ್ತಿನಲ್ಲಿಡಲು ಸಕ್ಷಮವಾದ ಪ್ರಾಧಿಕಾರವು ಅಂತಹ ಸರ್ಕಾರಿ ನೌಕರನನ್ನು ಕೂಡಲೇ ಅಮಾನತ್ತಿನಲ್ಲಿರಿಸತಕ್ಕದ್ದು."

(ಬಿ) ಒಬ್ಬ ಸರ್ಕಾರಿ ನೌಕರನನ್ನು ಅಮಾನತ್ತಿನಲ್ಲಿಡುವ ಆದೇಶವು 11ನೇ ನಿಯಮದ (4)ನೇ ಉಪ-ನಿಯಮದ ಮೇರೆಗೆ ಆರೋಪಗಳ ಪಟ್ಟಿಯನ್ನು ಜಾರಿಮಾಡಿದ ದಿನಾಂಕದಿಂದ ಅಥವಾ 12ನೇ ನಿಯಮದ (1)ನೇ ಉಪ-ನಿಯಮದ (ಎ) ಖಂಡದ ಮೇರೆಗೆ ಅವನ ವಿರುದ್ಧ ಕ್ರಮವನ್ನು ಕೈಗೊಳ್ಳಲು ಪ್ರಸ್ತಾಪಿಸಲಾಗಿದೆಯೆಂದು ಅವನಿಗೆ ತಿಳಿಸುವ ನೋಟಿಸ್‌ನ್ನು ಜಾರಿ ಮಾಡಿದ ದಿನಾಂಕದಿಂದ ಅಥವಾ ಕ್ರಿಮಿನಲ್ ಪ್ರಕರಣಗಳಲ್ಲಿ, ಸಕ್ಷಮ ನ್ಯಾಯಾಲಯದ ವ್ಯಾಪ್ತಿಯಲ್ಲಿ ಆರೋಪಪಟ್ಟಿ ದಾಖಲಿಸಿದ ದಿನಾಂಕದಿಂದ ಅಥವಾ ಅಮಾನತ್ತಿನ ಆದೇಶದ ದಿನಾಂಕದಿಂದ ಆರು ತಿಂಗಳ ಅವಧಿಯ ಅಂತ್ಯಕ್ಕೆ, ಇವುಗಳಲ್ಲಿ ಯಾವುದು ಮೊದಲೋ, ಅಂದು ಅದು ಸ್ವಯಂಚಾಲಿತವಾಗಿ ರದ್ದುಗೊಂಡಿದೆ ಎಂದು ಭಾವಿಸತಕ್ಕದ್ದು. ಈ ರೀತಿ ಅಮಾನತ್ತು ಆದೇಶವು ಸ್ವಯಂಚಾಲಿತವಾಗಿ ರದ್ದುಗೊಂಡ ನಂತರ, ನೇಮಕಾತಿ ಪ್ರಾಧಿಕಾರದಿಂದ ಸ್ಥಳನಿಯುಕ್ತಿ ಆದೇಶವನ್ನು ತಕ್ಷಣವೇ ಕೋರುವುದು ಸರ್ಕಾರಿ ನೌಕರನ ಕರ್ತವ್ಯವಾಗಿರುತ್ತದೆ ಹಾಗೂ ಅವನು ಆ ರೀತಿ ಕೋರಲು ವಿಫಲನಾದಲ್ಲಿ ಆತನ ಅಮಾನತ್ತಿನ ಆದೇಶವು ಸ್ವಯಂಚಾಲಿತವಾಗಿ ರದ್ದಾದ ದಿನಾಂಕದಿಂದ ಆತನು ಅನಧಿಕೃತವಾಗಿ ಗೈರುಹಾಜರಾಗಿರುವನೆಂದು ಭಾವಿಸತಕ್ಕದ್ದು;

ಪರಂತು, ಸರ್ಕಾರಿ ನೌಕರನನ್ನು ಅಮಾನತ್ತಿನಲ್ಲಿಡಲು ಸಕ್ಷಮವಾದ ಪ್ರಾಧಿಕಾರವು ಸದರಿ ಅವಧಿಯೊಳಗೆ ಖಂಡ (ಎ) ರಲ್ಲಿ ಉಲ್ಲೇಖಿಸಿರುವ ಪ್ರಾಧಿಕಾರದೊಂದಿಗೆ ಸಮಾಲೋಚಿಸಿದ ನಂತರವೇ ಮತ್ತು ಅಂತಹ ಪ್ರಾಧಿಕಾರವು ಸದರಿ

ಅವಧಿಯೊಳಗಾಗಿ ವಿಸ್ತರಿಸಲು ಶಿಫಾರಸ್ಸನ್ನು ಮಾಡಿದಾಗ ಮಾತ್ರ ಈ ಖಂಡದ ಮೇರೆಗೆ ನಿರ್ದಿಷ್ಟಪಡಿಸಿರುವ ಅಮಾನತ್ತಿನ ಅವಧಿಯನ್ನು ಮೀರಿ ವಿಸ್ತರಿಸಬಹುದು. ಇಲ್ಲವಾದಲ್ಲಿ ಈ ಖಂಡದ ಮೇರೆಗೆ ಸರ್ಕಾರಿ ನೌಕರನನ್ನು ಅಮಾನತ್ತಿನಲ್ಲಿಡುವ ಆದೇಶವು ಸ್ವಯಂಚಾಲಿತವಾಗಿ ರದ್ದಾಗುವುದು.

(ii) ಉಪ-ನಿಯಮ (6)ನ್ನು ಕೈಬಿಡತಕ್ಕದ್ದು.

**(iv) ನಿಯಮ 12ರ ತಿದ್ದುಪಡಿ**.- (i) ಉಪನಿಯಮ (1)ರ ಖಂಡ (ಬಿ)ಗೆ ಬದಲಾಗಿ ಈ ಕೆಳಕಂಡದ್ದನ್ನು ಪ್ರತಿಸ್ಥಾಪಿಸತಕ್ಕದ್ದು.

"(ಬಿ) ದಾಖಲೆಗಳನ್ನು ಹಾಗೂ ಖಂಡ (ಎ)ರಡಿ ಸರ್ಕಾರಿ ನೌಕರನು ಸಲ್ಲಿಸಿರಬಹುದಾದ ಯಾವುದೇ ಮನವಿಯನ್ನು ಪರಿಶೀಲಿಸಿದ ನಂತರ ಶಿಸ್ತು ಪ್ರಾಧಿಕಾರಿಯು ಈ ನಿಯಮಗಳ ನಿಯಮ 8ರ ಖಂಡ (v) ರಿಂದ (viii) ರವರೆಗೆ ನಿರ್ದಿಷ್ಟ ಪಡಿಸಿದ ಒಂದು ಅಥವಾ ಹೆಚ್ಚು ದಂಡನೆಗಳನ್ನು ವಿಧಿಸಲು ತೀರ್ಮಾನಿಸಿದಲ್ಲಿ ಆತ ಈ ನಿಯಮಗಳ ನಿಯಮ 11ರಲ್ಲಿ ನಿರ್ದಿಷ್ಟ ಪಡಿಸಲಾದಂತೆ ವ್ಯವಹರಣೆಗಳನ್ನು ಪ್ರಾರಂಭಿಸತಕ್ಕದ್ದು.

(ii) (1)ನೇ ಉಪ-ನಿಯಮದ ಖಂಡ (ಬಿ)ರ ಪರಂತುಕವನ್ನು ಕೈ ಬಿಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ
(ಚಂದ್ರಹಾಸ ಗಂ. ತಾಳೂಕರ)
ಸರ್ಕಾರದ ಉಪ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-2)

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE Digitally signed by SUNIL GARDE Date: 2020.05.04 16:06:25 +05'30'